# ಕನ್ನಡದ ಬಹುರೂಪಿ ಚಹರೆಗಳು



**ರಹಮತ್ ತರೀಕೆರೆ**

‘ಹಲವು ಕನ್ನಡಂಗಳು’ ರೂಪುಗೊಳ್ಳುವುದರ ಹಿಂದಿನ ಭೌಗೋಳಿಕ, ಸಾಂಸ್ಕೃತಿಕ ಹಾಗೂ ರಾಜಕೀಯ ಕಾರಣಗಳನ್ನು ಗಮನಿಸಿದರೆ, ಕನ್ನಡ ಭಾಷೆ ತನ್ನೊಳಗೆ ಅಂತರ್ಜಲದ ರೂಪದಲ್ಲಿ ಪ್ರಜಾಪ್ರಭುತ್ವ ಗುಣವನ್ನು ರೂಢಿಸಿಕೊಂಡಿರುವುದು ಸ್ಪಷ್ಟವಾಗಿ ಕಾಣಿಸುತ್ತದೆ.

## ಕನ್ನಡ-ಕನ್ನಡಂಗಳ್

ಸಂಸ್ಕೃತಿ, ರಾಜಕಾರಣ, ಧರ್ಮ, ಸಾಹಿತ್ಯ, ಭಾಷೆಗಳನ್ನು ಕುರಿತು ನಡೆಯುತ್ತಿರುವ ಚರ್ಚೆಗಳಲ್ಲಿ, ‘ಬಹುತ್ವ’ ‘ಬಹುಮುಖಿ’, ‘ಬಹುರೂಪಿ’ ಮೊದಲಾದ ನುಡಿಗಟ್ಟುಗಳು ಈಚೆಗೆ ಹೆಚ್ಚಾಗಿ ಕಾಣಿಸಿಕೊಳ್ಳುತ್ತಿವೆ. ಇದಕ್ಕೆ ಕಾರಣ, ಏಕರೂಪೀ ಚಿಂತನೆ ಹೇರಿಕೆಯಾಗುತ್ತಿರುವ ಸನ್ನಿವೇಶವು ದೇಶದಲ್ಲಿರುವುದು. ಒಕ್ಕೂಟ ಸರ್ಕಾರವು ಮಾಡುತ್ತಿರುವ ಹಿಂದಿ ಹೇರಿಕೆಗೆ ದೇಶಾದ್ಯಂತ ಬರುತ್ತಿರುವ ಪ್ರತಿರೋಧಗಳನ್ನು ಗಮನಿಸಬೇಕು. ಭಾರತದಲ್ಲಿ ಪ್ರಭುತ್ವವು ಮಾಡುವ ಭಾಷಾಹೇರಿಕೆಗೆ, ನಿರ್ದಿಷ್ಟ ಧರ್ಮ–ಸಂಸ್ಕೃತಿ ಆಲೋಚನಾಕ್ರಮದ ಹೇರಿಕೆಯ ಆಯಾಮವೂ ಇದೆ. ಹೀಗಾಗಿಯೇ ಪ್ರತಿಕ್ರಿಯೆಯಾಗಿ ಬಹುತ್ವದ ಧ್ಯಾನವೂ ನಡೆಯುತ್ತಿದೆ. ಬಹುತ್ವವೆಂದರೆ, ಹಲವು ಧರ್ಮ, ಸಂಸ್ಕೃತಿ, ಭಾಷೆಗಳು ಒಟ್ಟಿಗೇ ಬದುಕುವುದು ಮಾತ್ರವಲ್ಲ. ಅವುಗಳ ನಡುವಣ ಸಂಬಂಧವು ಸಮಾನನೆಲೆಯಲ್ಲಿ ಇರುವುದು; ಪರಸ್ಪರ ಕೊಡುಕೊಳೆ ಮಾಡುವ, ಮತ್ತೊಂದನ್ನು ತುಳಿಯದಿರುವ, ಅನ್ಯಾಯವಾದಾಗ ಸಂಘರ್ಷ ಮಾಡುವ ಗುಣಗಳಿರುವುದು. ಕನ್ನಡದ ಮಟ್ಟಿಗೆ ಹೇಳುವುದಾದರೆ, ಅದು ಅಧಿಕಾರಸ್ಥ ಭಾಷೆಗಳು ಹೇರಿಕೆಯಾದಾಗೆಲ್ಲ ಪ್ರತಿರೋಧಿಸಿದೆ. ಕರ್ನಾಟಕದಲ್ಲೇ ಇರುವ ಜನಭಾಷೆಗಳ ವಿಷಯದಲ್ಲಿ ಯಜಮಾನನಾಗಿ ವ್ಯವಹರಿಸಿದೆ. ಅಗತ್ಯ ಬಿದ್ದಾಗ ಅವುಗಳ ಜತೆ ಸ್ನೇಹ ಮಾಡಿದೆ. ಸ್ನೇಹವು ಸ್ವಂತಿಕೆ ಕಳೆವಂತಾದಾಗ ಆತ್ಮವಿಮರ್ಶೆ ಮಾಡಿಕೊಂಡಿದೆ. ತನ್ನ ಆತ್ಮರಕ್ಷಣಾತ್ಮಕ ಹಟ ಅತಿಗೆ ಹೋದಾಗ ಹೊಂದಾಣಿಕೆಯ ಹಾದಿ ಹುಡುಕಿದೆ. ಅದು ಚಾರಿತ್ರಿಕವಾಗಿ ಹಾದು ಬಂದಿರುವ ಈ ವೈರುಧ್ಯಕರ ಅವಸ್ಥೆಗಳಲ್ಲೇ ಅದರ ಬಹುರೂಪೀ ಚಹರೆಗಳು ಮೈದಳೆದಿವೆ. ಇಲ್ಲಿ ‘ಬಹುರೂಪೀ ಚಹರೆ’ಯೆಂದರೆ, ಕನ್ನಡದೊಳಗೇ ಇರುವ ವಿಭಿನ್ನ ಸ್ವರಗಳು. ‘ಕವಿರಾಜಮಾರ್ಗ’ ಹೇಳುವ ‘ಕನ್ನಡಂಗಳ್’. ಈ ಕನ್ನಡಂಗಳು ಸಾಮಾಜಿಕ ಭೌಗೋಳಿಕ ಸಾಹಿತ್ಯಕ ರಾಜಕೀಯ ಕಾರಣಗಳಿಂದ ಸೃಷ್ಟಿಯಾಗಿವೆ. ಇವನ್ನು ಅಸ್ಮಿತೆ, ಪ್ರತಿನಿಧೀಕರಣ, ಬಹುಭಾಷಿಕತೆ, ನುಡಿಸಂಕರ, ಪ್ರಮಾಣೀಕರಣ, ಪ್ರಜಾಸತ್ತಾತ್ಮಕತೆ ಎಂದು ಗುರುತಿಸಬಹುದು.

## ಅಸ್ಮಿತೆಯ ಹುಡುಕಾಟ

ಅಧಿಕಾರಸ್ಥ ನುಡಿಗಳ ಎದುರು ಪ್ರತಿರೋಧದ ಮೂಲಕ ತನ್ನತನ ಕಂಡುಕೊಳ್ಳುವ ಕನ್ನಡದ ತುಡಿತವು ಶರಣರಿಂದ ಆರಂಭಗೊಂಡಿತು ಎನ್ನಬಹುದು. ರಾಜಾಸ್ಥಾನದ ಕೇಳುಗರಿಗಾಗಿ ಸೃಷ್ಟಿಯಾದ ಸಂಸ್ಕೃತಭೂಯಿಷ್ಠ ಕನ್ನಡದಲ್ಲಿ, ಚಂಪೂ ಪ್ರಕಾರದಲ್ಲಿ, ಅವರು ‘ಉಳ್ಳವರು ಶಿವಾಲಯವ ಮಾಡುವರು’